ನಂಬರ್.	ದಸ್ತಾವೇಜು ಬರದು ಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾಪ್ತವಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
31-5-82ಲ್ಲಿ ತಿರಸ್ಕರಿಸಿದ್ದು 1882—83	ಚಾಮರಾಜನಗರದ ತಾಲ್ಲೂಕು ಕಸಬು ಹೊಂಗನೂರು ಗ್ರಾಮದಲ್ಲಿರುವ ಕೊಳೂರು ಲಿಂಗೇಗೌಡ	ಚಾಮರಾಜನಗರ ತಾಲ್ಲೂಕು ಕಸಬು ಹೊಂಗನೂರು ಗ್ರಾಮದಲ್ಲಿರುವ ಉಪ್ಪಲಿಗರ ಜಾತಿ ರಂಗೀಮಗ ಮಾದ	27-5-82	31-5-82	66 ರೂಪಾಯಿನ ಭೂಸ್ಥಿತಿ ಕ್ರಯಪತ್ರ.
1-6-82ರಲ್ಲು ತಿರಸ್ಕರಿಸಿದ್ದು 1882—83	ತಲ್ಕಾಡು ತಾಲ್ಲೂಕು ಮೂಗೂರು ಹೋಬಳಿ ಸರ್ವಮಾನ್ಯ ಕೆಂಪನಪುರ ಗ್ರಾಮದಲ್ಲಿರುವ ಕೆಂಗನಪುರದ ಶಾನುಭೋಗ ಶೇಷಕಂಠಯ್ಯನ ಮಗ ಶಂಕರಪ್ಪ	ಚಾಮರಾಜನಗರ ತಾಲ್ಲೂಕು ಆಲೂರು ಹೋಬಳಿ ಕೆಂಗನಪುರ ಗ್ರಾಮದಲ್ಲಿರುವ ಪಟೇಲ್ ಪುಟ್ಟೇಗವ್ಡ	1—6—82	1—6—82	10 ವರುಷದ ಪಾಯಿದೆ ಉಳ್ಳ ಜಮ್ಮಿ ಸಾಗುವಳಿ ದಸ್ತ್ಕಾವಜು. ವಾಯಿದೆನಂತರ ಬರದುಕೊಟ್ಟವನು ತೆಗದುಕೊಂಡಿರುವ 50 ರೂಪಾಯಿ ವಾಪಸ್ ಕೊಟ್ಟು ಜಮಿನನ್ನ ವಾಪಸ್ ಪಡಿಯತಕ್ಕದ್ದು.

ಅಬ್ದುಲ್ ಖಾದರ್, ಕೆ. ಬಿ.,
ಸಬ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಆಗಸ್ಟ್ 1884.

ಯಡಹಳ್ಳಿ ಆಕ್ಟಿಂಗ್ ಮುನಿಸಿಫ್ ಮತ್ತು ಫಸ್ಟ್ ಕ್ಲಾಸ್ ಮಾಜಿಸ್ಟ್ರೇಟ್ ಬಿ. ವೆಂಕಟಾಚಾರ್ಯರಿಗೆ, 1872ನೇ ಇಸವಿಯ Xನೇ ಆಕ್ಟ್ ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 25, (b) ಸೆಕ್ಷನ್ ಅನುಸರಿಸಿ, ಇದರಲ್ಲಿ ಕಂಡ ಅಧಿಕಾರಗಳು ಕೊಡಲ್ಪಟ್ಟಿರುತವೆ :—

1. ಲಾಷ್ ವಿಚಾರಣೆಬಗ್ಗೆ ಅಧಿಕಾರ, (ಸೆಕ್ಷನ್ 135.)
2. ಅವರಿಗೆ ದರ್ಖಾಸ್ತು ಮಾಡುವದಕ್ಕೆ ಅಥವಾ ದರಿಯಾಸ್ತು ಬಗ್ಗೆ ಕಮ್ಮಿಟ್ ಮಾಡುವದಕ್ಕೆ ಅಧಿಕಾರ ವಿರುವ ಮೊಕದ್ದಮೆಗಳಲ್ಲಿ ಫಿರ್ಯಾದುಗಳನ್ನು ದಾಖಲ್ಮಾಡಿಕೆಳ್ಳುವದಕ್ಕೂ ಪೋಲೀಸ್ ರಿಪೋರ್ಟುಗಳನ್ನು ತೆಗದುಕೊಳ್ಳುವದಕ್ಕೂ ಅಧಿಕಾರ, (ಸೆಕ್ಷನ್ 141.)
3. ನಿರೋಧ ವಗೈರೇಯನ್ನು ಅಡ್ಡೀಪಡಿಸುವಂತೆ ಹುಕ್ಕುಂ ಮಾಡುವದಕ್ಕೆ ಅಧಿಕಾರ, (ಸೆಕ್ಷನ್ 518.)
4. ಹೇಸಿಗೆಯು ಬಾರ್‌ಬಾರ್ ನಡಿಯದಂತೆ ಅಡ್ಡೀಪಡಿಸುವದಕ್ಕೆ ಹುಕ್ಕುಂ ಕೊಡಲು ಅಧಿಕಾರ (ಸೆಕ್ಷನ್ 519.)

ಮಹ್ಮದಲ್ಲಿ, ಕೆ. ಬಿ.
ಆಫಿಷಿಯೇಟಿಂಗ್ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್.

ಸ್ರ 1884ನೇ ಇಸವಿ ಜುಲೈ ತಿಂಗಳ ಕಾಲಸ್ಥಿತೀ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ—ಬೆಂಗಳೂರು ಪಟ್ಟಣದಲ್ಲಿ, 1 ಅಂಗುಲ 45 ಸೆಂಟ್ಸ್ ಮಳೆ ಆಗಿರುತ್ತೆ.

ಬೆಳೆಗಳ ಸ್ಥಿತಿ ಮತ್ತು ಕಾಲಸ್ಥಿತಿ—ಡಿಸ್ಟ್ರಿಕ್ಟಿನ ಅನೇಕಭಾಗಗಳಲ್ಲಿ ಈಚಿಗೆ ಬೇರುವಾದ ಬೆಳೆಗಳಿಗೆ ಮಳೆ ಅತ್ಯಾವಶ್ಯಕವಾಗಿರುತ್ತೆ. ರಾಗಿ, ಅವರೆ, ತೊಗರಿ ಮತ್ತು ನೆಲ್ಲು ಯಿವು ಕೆಲವು ಭಾಗದಲ್ಲಿ ಬಿತ್ತಲ್ಪಟ್ಟಿರುತವೆ. ಕಾಲಸ್ಥಿತಿ ಚನ್ನಾಗಿಲ್ಲ, ಆದರೆ ವಂದೆರಡು ಭಾರಿಮಳೆ ಬಂದದ್ದಾದರೆ ಕಾಲಸ್ಥಿತಿ ಅಭಿವೃದ್ಧಿ ಆಗಬಹುದು.

ಜನಾರೋಗ್ಯ—ಸಾಧಾರಣವಾಗಿ ಚನ್ನಾಗಿದೆ.

ಕಾಲ್ನಡೆಗಳು—ಆರೋಗ್ಯವಾಗಿವೆ. ಕೆಲವು ಸ್ಥಳಗಳಲ್ಲಿ ಕಾಲುಬಾಯಿ ಜ್ವರ ವ್ಯಾಪಿಸಿದೆ. ಯಲ್ಲುಕಾರಣಗಳಿಂದಲೂ 2,113 ಕಾಲ್ನಡೆಗಳು ಹೋದವು, ಆ ಹಿಂದಿನ ತಿಂಗಳಲ್ಲಿ 1,808 ಹೋದವು, ಈ ಪೈ 285 ಕಾಲ್ನಡೆಗಳು ಕಾಡುಮೃಗಗಳಿಂದ ಕೊಲ್ಲಲ್ಪಟ್ಟವು.

ಜನಮರಣ—ಜ್ಯೂ ತಿಂಗಳಲ್ಲಿ 629 ಮಂದಿಯೂ ಆ ಹಿಂದಿನ ತಿಂಗಳಲ್ಲಿ 656 ಮಂದಿಯೂ ಮೃತಪಟ್ಟರು, ಪೊಕಾಬಿಲ 27 ಕಮ್ಮಿ, ಮುಖ್ಯವಾಗಿ ಜ್ವರದಿಂದಲೆ ಮೃತಪಟ್ಟರುತ್ತಾರೆ.

ಜಮ್ರ್ಗಳು—ಸಾಗುವಳೀ ಬಗ್ಯಾಗಿ 4,857—1—8 ರೂಪಾಯಿಗಳು ಕಂದಾಯವುಳ್ಳ ಜಮ್ರ್ಗಳು ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದೂ ಬರಲಿಲ್ಲವು.

ಎ. ಯಚ್. ಮೆಕ್ಕಟ್ಯೆರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಮಳೆ.—ಡಿಸ್ಟ್ರಿಕ್ಟ್ ವ. ತಾಲ್ಲೂಕು ಹೆಡ್ ಕ್ವಾರ್ಟರುಗಳಲ್ಲಿ ಇದರಡೀ ಕಂಡಂತೆ ಮಳೆ ಅಳೆಯಲ್ಪಟ್ಟಿರುತ್ತೆ:—

ತಾಲ್ಲೂಕುಗಳು	ಮಳೆ ಅಂ.	ಸೆಂಟ್ಸ್.	ತಾಲ್ಲೂಕುಗಳಲ್ಲಿ	ಮಳೆ ಅಂ.	ಸೆಂಟ್ಸ್
ತರೀಕೆರೆ ..	4	0	ಯಡೆಹಳ್ಳಿ ..	14	95
ಕೊಪ್ಪ ..	38	40	ಹಾಸನ ..	2	26
ಚಿಕ್ಕಮಗಳೂರು ..	3	59	ಬೇಲೂರು ..	3	44
ಕಡೂರು ..	0	56	ಮಂಜೆರಾಬಾದ್ ..	24	9
ಮೂಡಿಗೆರೆ ..	18	76	ಅರಸೀಕೆರೆ ..	0	53¾

ಬೀಜ ವೇರಾವಾದ್ದು—ತರೀಕೆರೆ, ಚಿಕ್ಕಮಗಳೂರು ಮೂಡಿಗೆರೆ, ಮಂಜೆರಾಬಾದು ವ ಬೇಲೂರು ಈ ತಾಲ್ಲೂಕುಗಳಲ್ಲಿ ನೆಲ್ಲು ಮತ್ತು ರಾಗಿ, ವೇರಾವಾದವು. ಅರಸೀಕೆರೆ ವ ಕೊಪ್ಪ ತಾಲ್ಲೂಕುಗಳಲ್ಲಿ ನೆಲ್ಲು ಮಾತ್ರ ವೇರಾವಾಯಿತು. ಹಾಸನದಲ್ಲಿ ನೆಲ್ಲು, ರಾಗಿ, ಅವರೆ, ಮೆಣಸಿನ ಕಾಯಿ ಮತ್ತು ಕಡೂರು ತಾಲ್ಲೂಕಿನಲ್ಲಿ ನೆಲ್ಲು, ಜೋಳ, ಹೆಸರು, ಉದ್ದು ವೇರಾವಾದವು.

ಫಸಲ್‌ಗಳ ಸ್ಥಿತಿ—ತರೀಕೆರೆ ವ ಬೇಲೂರು ತಾಲ್ಲೂಕುಗಳಲ್ಲಿ ಚನ್ನಾಗಿವೆ; ಮೂಡಿಗೆರೆ, ಕೊಪ್ಪ ವ ಮಂಜೆರಾಬಾದು ತಾಲ್ಲೂಕುಗಳಲ್ಲಿ ಸಾಧಾರಣವಾಗಿರುತ್ತೆ. ಇತರ ತಾಲ್ಲೂಕುಗಳಲ್ಲಿ ಮಧ್ಯಸ್ತವಾಗಿರುತ್ತೆ.

ಫಸಲ್ ಕಟುವಾದ್ದು—ಇಲ್ಲ.

ಕಾಲಸ್ಥಿತಿ— ಚನ್ನಾಗಿದೆ.

ಜನಾರೋಗ್ಯ—ಜ್ವರ ವ್ಯಾಪಿಸಿರುವ ಚಿಕ್ಕಮಗಳೂರು, ಕಡೂರು, ಕೊಪ್ಪ ವ ಮೂಡಗೆರೆ ತಾಲ್ಲೂಕುಗಳಲ್ಲಿ ವಿನಾ, ಮಿಕ್ಕ ತಾಲ್ಲೂಕುಗಳಲ್ಲಿ ಚನ್ನಾಗಿರುತ್ತೆ.

ಕಾಲ್ನಡೆ—ತರೀಕೆರೆ, ಮೂಡಿಗೆರೆ ವ ಹಾಸನ ತಾಲ್ಲೂಕುಗಳಲ್ಲಿ ಚಪ್ಪೆ ಮತ್ತು ಬಾಯಿಜ್ವರ ವ್ಯಾಪಿಸಿರುತ್ತೆ. ಈ ತಿಂಗಳಲ್ಲಿ 1,243 ಆ ಹಿಂದಿನ ತಿಂಗಳಲ್ಲಿ 1,103 ಕಾಲ್ನಡೆಗಳು ಹೋಗಿರುತ್ತವೆ.

ಜಮ್ರ್ಗಳು—ಸಾಗುವಳೀ ಬಗ್ಯಾಗಿ 4,022—12—0 ರೂಪಾಯಿಗಳು ಕಂದಾಯವುಳ್ಳ ಜಮ್ರ್ಗಳು ತೆಗದುಕೊಳ್ಳಲ್ಪಟ್ಟವು. ರಾಜೀನಾಮೆ ಯಾವದೂ ಬರಲಿಲ್ಲವು.

ದಾರಣೆಗಳು—ಜಾಸ್ತೀಯಾಗುವ ಹಾಗೆ ಕಾಣುತ್ತೆ.

ಜಿ. ಯಫ್. ಮೈಕಲ್‌ಜಾರ್ಜ್,
ಡೆಪ್ಯುಟಿ ಕಮ್ಮಿಷನರ್.

ಕ್ರಿಸ್ಟಲ್ಲೈಸ್ಡ್ ಸಿಂಕೋನಾ ಫೆಬ್ರಿಫ್ಯೂಜ್.

ಗವರ್ಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಕೋನಾ ಪಟ್ಟೆಯಿಂದ ತಯಾರ್ ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಜ್ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು ಕಲ್ಕತ್ತೆ ಬಳಿ ಸೀಬ್‌ಪೂರ್ ಸಮೀಪದಲ್ಲಿ ರಾಯಲ್‌ಬೊಟಾನಿಕ್ ಗಾರ್ಡ್ನ ಸೂಪರ್‌ಟೆಂಡೆಂಟರಿಂದ ಗವರ್ಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಬಂದು ಸಲಕ್ಕೆ ಇಪ್ಪತ್ತು ಪೌಂಡು ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಬಂದಕ್ಕೆ 24 ರೂಪಾಯಿಗಳ ದರ ಪ್ರಕಾರ, ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕ್ ಗಾರ್ಡ್ನ ಸೂಪರ್‌ಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್ ಬಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯರ್ಸ್ ಮತ್ತು ನೇಟಿವ್ ಡ್ರಗ್ಗಿಸ್ಟ್‌ಗಳು ಸರಬರಾಯಿ ಮಾಡತಕ್ಕದ್ದು. ಟಫ್ಸಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.